(ಕಂದಾಯ ಇಲಾಖೆ)

ಸಹಾಯಕಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:218/12-13 ದಿನಾಂಕ:09.06.2016.

ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ
ಸಹಾಯಕ ಆಯುಕ್ತರು, ಹೊಸಪೇಟೆ.

* * * * *

ವಾದಿಗಳು: ಶ್ರೀ/ ಶ್ರೀಮತಿ

1] ನರೇಗಲ್ ಸುರೇಶ ತಂದೆ
ಲೇಟ್ ನರೇಗಲ್ ಮಲ್ಲಪ್ಪ,
ವಾಸ: ಮಾಲವಿ ಗ್ರಾಮ, ಹಗರಿಬೊಮ್ಮನಹಳ್ಳಿ
ತಾಲೂಕು, ಬಳ್ಳಾರಿ ಜಿಲ್ಲೆ.

ಪ್ರತಿವಾದಿಗಳು: ಶ್ರೀ/ ಶ್ರೀಮತಿ

1] ಚಿನಿವಾಲರ ಬಸವಂಣೆಮ್ಮ ಗಂಡ ದಿ॥ ಮುರಿಗೆಪ್ಪ,
ವಾಸ: ಮಾಲವಿ ಗ್ರಾಮ, ಹಗರಿಬೊಮ್ಮನಹಳ್ಳಿ
ತಾಲೂಕು, ಬಳ್ಳಾರಿ ಜಿಲ್ಲೆ.
2] ತಶೀಲ್ದಾರರು, ಹಗರಿಬೊಮ್ಮನಹಳ್ಳಿ.

[ಶ್ರೀ ಕೆ.ಸಿ.ಶರಣಪ್ಪ, ವಕೀಲರು, ಹೊಸಪೇಟೆ]

ವ್ಯಾಜ್ಯದಜಮೀನು

ತಾಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ
ಹಗರಿಬೊಮ್ಮನಹಳ್ಳಿ	ಕೋಗಳಿ	ಮಾಲವಿ	165/ಸಿ ಪೈಕಿ	00 ಎಕರೆ 64 ಸೆಂಟ್ಸ್

ಪೀಠಿಕೆ:-

ಹಗರಿಬೊಮ್ಮನಹಳ್ಳಿ ತಾಲೂಕು ಕೋಗಳಿ ಹೋಬಳಿ ಮಾಲವಿ ಗ್ರಾಮದ ಸ.ನಂ.165/ಸಿ ಪೈಕಿ ವಿಸ್ತೀರ್ಣ:00 ಎಕರೆ 64 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕೋಗಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:01/1980-81 ದಿನಾಂಕ:08.12.1980 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:18.12.2015 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:18.02.2016 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.

1. ಸದರಿ ವ್ಯಾಜ್ಯದ ಜಮೀನನ್ನು ಸುರೇಶ ನಿಗೇವಾನಿ ಜನಕ ತಂದೆ ನರೇಗಲ್ ವೀರಪ್ಪನ ಮಗ **ಮಲ್ಲಪ್ಪ** ಇವರಿಗೆ ಮುರಿಗೆಪ್ಪ ತಂದೆ ಚಿನಿವಾಲರ ವಿರುಪಾಕ್ಷಪ್ಪ ಇವರು ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:217/1980-81 ದಿನಾಂಕ:16.06.1980 ರ ಮೂಲಕ ರೂ.500/- ಗಳಿಗೆ ಕ್ರಯಕ್ಕೆ ನೀಡಿರುವುದು ಕ್ರಯ ಪತ್ರದ ಪ್ರತಿ ಹಾಗೂ ಇ.ಸಿ.(ನಮೂನೆ-15) ಪ್ರತಿಯಿಂದ ಕಂಡುಬಂದಿರುತ್ತದೆ.
2. ಕ್ರಯಕ್ಕೆ ಪಡೆದ ದಿನದಿಂದಲೂ ವಾದಿಯ ತಂದೆಯಾದ **ಮಲ್ಲಪ್ಪ** ಇವರೇ ಸದರಿ ಜಮೀನಿನ ಹಕ್ಕು ಹಾಗೂ ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ಇವರ ಮರಣಾನಂತರ ವಾದಿಯು ಸದರಿ ಜಮೀನಿನ ಹಕ್ಕು ಹಾಗೂ ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ಆದರೆ, ಕ್ರಯಕ್ಕೆ ಪಡೆದ ದಿನದಿಂದಲೂ ಈ ವರೆಗೂ ವಾದಿಗಳ ಹೆಸರು ಪಹಣಿಯಲ್ಲಿ ನಮೂದಾಗಿರುವುದಿಲ್ಲ ಎಂದು ವಾದಿಪರ ವಕೀಲರು ತಿಳಿಸಿರುತ್ತಾರೆ.

3. 1968-69 ರಿಂದ 1990-91 ವರೆಗೆ ವಿಕ್ರಯದಾರರಾದ ಮುರಿಗೆಪ್ಪ ತಂದೆ ಚಿನಿವಾಲರ ವಿರುಪಾಕ್ಷಪ್ಪ ಇವರ ಹೆಸರು ನಮೂದು ಇದ್ದು, 1991-92 ರಿಂದ 2011-12 ರವರೆಗಿನ ಪಹಣಿ ಪತ್ರಿಕೆಯ ಕಾಲಂ 9 ರಲ್ಲಿ ವಿಕ್ರಯದಾರರ ಹೆಂಡತಿಯಾದ ಚಿನಿವಾಲರ ಬಸವಂಣೆಮ್ಮ ಗಂಡ ಲೇಟ್ ಮುರಿಗೆಪ್ಪ ಇವರ ಹೆಸರಿನಲ್ಲಿ ನಮೂದು ಇರುವುದು ಕಂಡುಬಂದಿರುತ್ತದೆ.
4. ಪ್ರಶ್ನಿತ ಹಕ್ಕು ಬದಲಾವಣೆ ಆದೇಶ ಸಂಖ್ಯೆ:01/1980-81 ದಿನಾಂಕ:08.12.1980 ವನ್ನು ಪರಿಶೀಲಿಸಲಾಗಿ ಸದರಿ ಆದೇಶದಲ್ಲಿ ತುಂಡು ಜಮೀನು ಆದ್ದರಿಂದ ಗೈರು ಮಂಜೂರು ಎಂದು ನಮೂದು ಇರುವುದು ಕಂಡುಬಂದಿರುತ್ತದೆ. ಸದರಿ ಹಕ್ಕು ಬದಲಾವಣೆ ತಿರಸ್ಕೃತಗೊಂಡಿದ್ದು, ಸದರಿ ಆದೇಶದಿಂದ ಬಾದಿತಗೊಂಡ ವಾದಿಯು ತಮ್ಮ ಹೆಸರಿಗೆ ನೋಂದಾಯಿತ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಸದರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.
5. ಸದರಿ ಅಪೀಲನ್ನು ದಿನಾಂಕ:02.12.2014 ರಂದು ಉಭಯ ಪಕ್ಷಗಾರರು ಸತತವಾಗಿ ಗೈರಾಗಿರುವುದರಿಂದ ಸದರಿ ಅಪೀಲನ್ನು ಮುಕ್ತಾಯಗೊಳಿಸಲಾಗಿದ್ದು, ಆದರೆ ದಿನಾಂಕ:18.12.2015 ರಂದು ವಾದಿಪರ ವಕೀಲರು ಕರ್ನಾಟಕ ಭೂ ಕಂದಾಯ ಕಲಂ-44 ಮತ್ತು ಕಲಂ 25 ರಡಿಯಲ್ಲಿ ಹಾಗೂ ಸಹಕ್ತಮಾದೇಶ 9 ನಿಯಮ 4 ಸಿ.ಪಿ.ಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿ ಸದರಿ ಅಪೀಲನ್ನು ಪುನರವಲೋಕನಕ್ಕೆ ಅವಕಾಶ ಮಾಡಿಕೊಡಲು ಕೋರಿದ್ದು, ಕೋರಿಕೆಯನ್ನು ಮನ್ನಿಸಿ ವಿಚಾರಣೆ ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹಗರಿಬೊಮ್ಮನಹಳ್ಳಿ ತಾಲೂಕು ಕೋಗಳಿ ಹೋಬಳಿ ಮಾಲವಿ ಗ್ರಾಮದ ಸ.ನಂ.165/ಸಿ ಪೈಕಿ ವಿಸ್ತೀರ್ಣ:00 ಎಕರೆ 64 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕೋಗಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:01/1980-81 ದಿನಾಂಕ:08.12.1980 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನ್ನು ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:484/1972-73 ದಿನಾಂಕ:15.06.1972 ರ ಪ್ರಕಾರ ಕ್ರಯದಾರರಾದ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡತೆ

-: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹಗರಿಬೊಮ್ಮನಹಳ್ಳಿ ತಾಲೂಕು ಕೋಗಳಿ ಹೋಬಳಿ ಮಾಲವಿ ಗ್ರಾಮದ ಸ.ನಂ.165/ಸಿ ಪೈಕಿ ವಿಸ್ತೀರ್ಣ:00 ಎಕರೆ 64 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕೋಗಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:01/1980-81 ದಿನಾಂಕ:08.12.1980 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನ್ನು ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:484/1972-73 ದಿನಾಂಕ:15.06.1972 ರ ಪ್ರಕಾರ ಕ್ರಯದಾರರಾದ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:09.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ಅವಿನಾಶ್ ಮೆನನ್ರಾಜೇಂದ್ರನ್, ಭಾ.ಆ.ಸೇ]
ಸಹಾಯಕಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ
ಪ್ರತಿಯನ್ನು:- ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.